**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 8/2014**

**ದೋ.ಸಾ. : 9 ಫ್ರಾ.ಸಾ. : 5**

ಸಾಕ್ಷಿಯ ಹೆಸರು : ಎಚ್.ಎಂ. ಸುರೇಶ

ತಂದೆಯ ಹೆಸರು : ಕೆ. ಮಹಾದೇವಯ್ಯ

ವಯಸ್ಸು : 42 ವರ್ಷ

ಉದ್ಯೋಗ : ಕಚೇರಿ ಸಹಾಯಕ, ಮೈಸೂರು ಮಹಾನಗರಪಾಲಿಕೆ

ವಾಸ : ಮೈಸೂರು

**ದಿನಾಂಕಃ 11-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು 2001 ರಿಂದ 01.02.2017 ರವರೆಗೆ ಮೈಸೂರು ಮಹಾನಗರಪಾಲಿಕೆಯಲ್ಲಿ ನಾನು ವ್ಯವಸ್ಥಾಪಕ ಆಗಿ ಕಾರ್ಯ ನಿರ್ವಹಿಸುತ್ತಿದ್ದೆ. ದಿನಾಂಕ 30.04.2010 ರಂದು ನಾನು ಮೈಸೂರು ಮಹಾನಗರಪಾಲಿಕೆಯಲ್ಲಿ ಆಯುಕ್ತರ ಆಪ್ತ ಸಹಾಯಕನಾಗಿ ಕೆಲಸ ನಿರ್ವಹಿಸುತ್ತಿದ್ದೆ. ಆಗ ನಮ್ಮ ಕಚೇರಿಯ ವ್ಯವಸ್ಥಾಪಕರು ನನಗೆ ಮೈಸೂರು ಲೋಕಾಯುಕ್ತ ಕಚೇರಿಗೆ ಪಂಚ ಆಗಿ ಹೋಗುವಂತೆ ಹೇಳಿದರು. ಚಾಸಾ-8 ನನ್ನ ಕಚೇರಿಯವರಾಗಿದ್ದು ಅವರನ್ನೂ ಸಹ ನನ್ನ ಜೊತೆ ಪಂಚ ಆಗಿ ಲೋಕಾಯುಕ್ತ ಕಚೇರಿಗೆ ಹೋಗುವಂತೆ ತಿಳಿಸಿದರು . ನಾವು ಸಂಜೆ 4.15-4.30 ಗಂಟೆಗೆ ಮೈಸೂರಿನ ಲೋಕಾಯುಕ್ತ ಕಚೇರಿಗೆ ಹೋದೆವು . ಅಲ್ಲಿ ಹೋದಾಗ ಆರಕ್ಷಕ ಅಧೀಕ್ಷಕರು , ಲೋಕಾಯುಕ್ತರವರು ಇದ್ದರು. ಅವರು ನಮಗೆ ದಿನಾಂಕ 03.05.2010 ರಂದು ಬೆಳಿಗ್ಗೆ 8.00-8.30 ಗಂಟೆಗೆ ಪುನಃ ಅವರ ಕಚೇರಿಗೆ ಬರುವಂತೆ ಹೇಳಿದರು . ನಾವು ದಿನಾಂಕ 03.05.2010 ರಂದು ಬೆಳಿಗ್ಗೆ 8.00 ಗಂಟೆಗೆ ಲೋಕಾಯುಕ್ತ ಕಚೇರಿಗೆ ಮೈಸೂರಿಗೆ ಹೋದೆವು . ಅಲ್ಲಿ ಅವರ ಮುಂದೆ ವರದಿ ಮಾಡಿಕೊಂಡೆ . ಆಗ ಅಲ್ಲಿ ಲೋಕಾಯುಕ್ತ ಆರಕ್ಷಕ ಉಪಾಧೀಕ್ಷಕರು ಹಾಜರು ಇದ್ದರು . ಅವರು ದಾಳಿಗೆ ಹೋಗಬೇಕಾಗಿದೆ ಎಂದು ಹೇಳಿದರು ಮತ್ತು ಅಲ್ಲಿ ಇದ್ದ ಆರಕ್ಷಕ ನಿರೀಕ್ಷಕರನ್ನು ನಮಗೆ ಪರಿಚಯ ಮಾಡಿಕೊಟ್ಟರು . ಅಲ್ಲಿ ಇತರೇ ಸಿಬ್ಬಂದಿ ಸಹ ಇದ್ದರು. ಅವರ ಪರಿಚಯ ಸಹ ಮಾಡಿಸಿಕೊಟ್ಟರು . ನಂತರ ಬೆಳಿಗ್ಗೆ 9.00 ಗಂಟೆಗೆ ಲೋಕಾಯುಕ್ತ

ಇಲಾಖೆಯ ಜೀಪಿನಲ್ಲಿ ಮೈಸೂರಿನ ಲೋಕಾಯುಕ್ತ ಕಚೇರಿಯಿಂದ ಶಿರಾ ಮಾರ್ಗವಾಗಿ ರಾಷ್ಟ್ರೀಯ ಹೆದ್ದಾರಿ 4 ರಲ್ಲಿ ಬೆಳಗಾವಿ ಕಡೆ ಹೋದೆವು . ರಾತ್ರಿ 9.30 ಗಂಟೆಗೆ ಬೆಳಗಾವಿ ಮುಟ್ಟಿದೆವು . ಬೆಳಗಾವಿಯಲ್ಲಿ ನಾವು ಯಾವುದೋ ಲಾಡ್ಜ್ ನಲ್ಲಿ ತಂಗಿದೆವು . ಮರುದಿನ ದಿನಾಂಕ 04.05.2010 ರಂದು ಪುನಃ ನಾವು ಬೆಳಿಗ್ಗೆ 6.30 ಗಂಟೆಗೆ ಎಲ್ಲರೂ ಸೇರಿದೆವು . ಆಗ ಲೋಕಾಯುಕ್ತ ನಿರೀಕ್ಷಕರು , ಅವರ ಸಿಬ್ಬಂದಿ ಮತ್ತು ನಾವು ಇದ್ದೆವು . ಆಗ ನಮ್ಮ ಮುಂದೆ ಒಂದು ಮೊಹರಾಗಿದ್ದ ಲಕೋಟೆಯನ್ನು ತೆಗೆದರು . ಆಗ ನಮಗೆ ಪ್ರಥಮ ವರ್ತಮಾನ ವರದಿ ತೋರಿಸಿದರು . ನರೇಂದ್ರ ಹಿತ್ತಲಮಕ್ಕಿ ಸಹಾಯಕ ಅರಣ್ಯ ಸಂರಕ್ಷಕರವರ ವಿರುದ್ಧ ಪ್ರಕರಣ ದಾಖಲಾಗಿದೆ . ಅವರ ಮಕ್ಕಳು ಇರುವ ಪ್ಲಾಟ್ ಗೆ ಶೋಧನೆ ಮಾಡಲು ಹೋಗುತ್ತಿರುವುದಾಗಿ ಶೋಧನಾ ವಾರೆಂಟ್ ತೋರಿಸಿದರು . ನಮ್ಮನ್ನು ಬೆಳಗಾವಿ ನಗರ ತಿಲಕವಾಡಿ ಆರ್ ಪಿ ಡಿ ಕ್ರಾಸ್ ಹತ್ತಿರ ಇರುವ ಸರಾಫ್ ರೆಸಿಡೆಂನ್ಸಿಯ ಪ್ಲಾಟ್ ಸಂ. 203(ಬಿ) ಗೆ ಕರೆದುಕೊಂಡು ಹೋದರು . ನಾವು ಅಲ್ಲಿಗೆ ಹೋದಾಗ ಆ ಪ್ಲಾಟ್ ಗೆ ಬೀಗ ಹಾಕಿತ್ತು . ಆಗ ಆರಕ್ಷಕ ನಿರೀಕ್ಷಕರು ಆರಕ್ಷಕ ಉಪಾಧೀಕ್ಷಕರಿಗೆ ದೂರವಾಣಿ ಕರೆ ಮಾಡಿದರು . ಆಗ ಉಪಾಧೀಕ್ಷಕರು ಆರೋಪಿಯ ಸಹೋದರ ಆರ್ ಟಿ ಓ ಇಲಾಖೆಯ ನಿರೀಕ್ಷಕರು ಆಗಿದ್ದಾರೆ ಅವರನ್ನು ಸಂಪರ್ಕಿಸಿ ಎಂದು ಹೇಳಿದರು ಮತ್ತು ಅವರ ಸಹಾಯ ಪಡೆಯಲು ಹೇಳಿದರು . ಅವರ ಹೆಸರು ವಿವರವನ್ನು ನೀಡಿದರು . ನಾವು ಬೆಳಿಗ್ಗೆ 11.30 ಗಂಟೆವರೆಗೆ ಕಾಯುತ್ತಿದ್ದೆವು . ನಾವೆಲ್ಲಾ ಆರ್ ಟಿ ಓ ಕಚೇರಿ ಬೆಳಗಾವಿಗೆ ಹೋಗಿ ಅಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗೆ ಮಾಹಿತಿ ನೀಡಿದೆವು . ನಮ್ಮ ಜೊತೆ ಆರೋಪಿಯ ಸಹೋದರ ನಿತ್ಯಾನಂದ ಹಿತ್ತಲಮಕ್ಕಿರವರನ್ನು ಕಳುಹಿಸುವಂತೆ ಕೇಳಿದರು. ಪ್ರಕರಣ ದಾಖಲಾಗಿರುವ ಬಗ್ಗೆ ಅವರಿಗೆ ಮಾಹಿತಿ ನೀಡಿದರು . ನಂತರ ಅವರೊಂದಿಗೆ ನಾವೆಲ್ಲರೂ ಮಧ್ಯಾಹ್ನ 1.30 ಗಂಟೆಗೆ ಮೇಲ್ಕಂಡ ಪ್ಲಾಟ್ ಸಂ. 203(ಬಿ) ಗೆ ಬಂದೆವು . ಅದರ ಚಾವಿ ಕಾವಲುಗಾರನಾದ ಶ್ರೀಧರ ಮಲ್ಲಾರಾವ್ ದೇಶಪಾಂಡೆ ಎನ್ನುವವನ ಬಳಿ ಇತ್ತು . ಅವರಿಂದ ಚಾವಿ ಪಡೆದು ಆ ಪ್ಲಾಟ್ ನ ಬೀಗ ತೆಗೆದೆವು . ನಿತ್ಯಾನಂದ ಹಿತ್ತಲಮಕ್ಕಿರವರಿಗೆ ಶೋಧನಾ ವಾರೆಂಟ್ ಅನ್ನು ತೋರಿಸಿ ನಂತರ ಪ್ಲಾಟ್ ನ ಬೀಗ ತೆಗೆದೆವು . ನಾವೆಲ್ಲರೂ ನಮ್ಮ ಅಂಗಶೋಧನೆ ಮಾಡಿಕೊಂಡೆವು . ನಮ್ಮ ಬಳಿ ಯಾವುದೇ ವಸ್ತುಗಳು ಇರಲಿಲ್ಲ . ಆರೋಪಿ ಅವರ ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ಆ ಪ್ಲಾಟ್ ಅನ್ನು ಬಾಡಿಗೆಗೆ ಪಡೆದಿದ್ದರು . ಆ ಪ್ಲಾಟ್ ಗೆ

ವಿದ್ಯುತ್ ಮೀಟರ್ ಇತ್ತು . ಅದರ ಸಂಖ್ಯೆ ಗೊತ್ತಿಲ್ಲ. ನಾವು ಪ್ರವೇಶದ್ವಾರದಿಂದ ಮನೆಯ ಹಾಲ್ ಗೆ ಹೋದಾಗ ಕಂಡು ಬಂದ ವಸ್ತುಗಳನ್ನು ಆಗ ಪಂಚನಾಮೆ ಬರೆದು ಪಂಚನಾಮೆಯಲ್ಲಿ ಬರೆದುಕೊಳ್ಳಲಾಗಿರುತ್ತದೆ . ಅಲ್ಲಿ 21 ವಸ್ತುಗಳು ಇದ್ದವು . ಅವುಗಳನ್ನು ಜಪ್ತು ಮಾಡಲಿಲ್ಲ ಅಲ್ಲಿಯೇ ಬಿಟ್ಟರು . ನಂತರ ಆ ಹಾಲ್ ನ ಎಡಕ್ಕೆ ಇದ್ದ ಒಂದು ಕೊಠಡಿಗೆ ಹೋದೆವು . ಅಲ್ಲಿ ಇದ್ದ ಎಲ್ಲಾ ವಸ್ತುಗಳ ವಿವರವನ್ನು ಪಂಚನಾಮೆಯಲ್ಲಿ ನಮೂದಿಸಿದರು . ಅಲ್ಲಿ ಕ್ರಮ ಸಂ. 22 ರಿಂದ 63 ವಸ್ತುಗಳು ಇದ್ದವು . ನಂತರ ಅಲ್ಲಿ ಇದ್ದ ಅಡಿಗೆ ಕೋಣೆಗೆ ಹೋದೆವು . ಅಲ್ಲಿ ಇದ್ದ ವಸ್ತುಗಳ ವಿವರವನ್ನು ಪಂಚನಾಮೆಯಲ್ಲಿ ಕ್ರಮ ಸಂ. 64 ರಿಂದ 104 ರ ಪ್ರಕಾರ ನಮೂದಿಸಿಕೊಂಡರು . ಅದರ ಎಡಕ್ಕೆ ಒಂದು ಹೊಂದಿಕೊಂಡ ಸ್ನಾನದ ಕೋಣೆ ಇತ್ತು . ಅಲ್ಲಿ ಇದ್ದ ವಸ್ತುಗಳ ವಿವರವನ್ನು ಕ್ರಮ ಸಂ. 105 ರಿಂದ 108 ರ ಪ್ರಕಾರ ಪಂಚನಾಮೆಯಲ್ಲಿ ಬರೆದುಕೊಂಡೆವು . ಆ ಸ್ನಾನದ ಕೋಣೆಯಿಂದ ಹೊರಗಡೆ ಒಂದು ಕೊಠಡಿ ಇತ್ತು . ಅಲ್ಲಿ ಇದ್ದ ವಸ್ತುಗಳನ್ನು ಪರಿಶೀಲಿಸಿ ಅವುಗಳನ್ನು ಪಂಚನಾಮೆಯಲ್ಲಿ ಕ್ರಮ ಸಂ. 109 ರಿಂದ 133 ರ ಪ್ರಕಾರ ನಮೂದಿಸಿಕೊಂಡೆವು . ಆ ಕೊಠಡಿಯಲ್ಲಿ ಅನೇಕ ದಾಖಲಾತಿಗಳು ಸಿಕ್ಕವು . ಅವುಗಳ ವಿವರವನ್ನು ಪಂಚನಾಮೆಯಲ್ಲಿ ಕ್ರಮ ಸಂ. 134 ರಿಂದ 181 ರ ಪ್ರಕಾರ ನಮೂದಿಸಿಕೊಳ್ಳಲಾಗಿರುತ್ತದೆ . ಆ ದಾಖಲೆಗಳನ್ನು ಜಪ್ತು ಮಾಡಿದರು . ಬಾಕಿ ಯಾವುದೇ ವಸ್ತುಗಳನ್ನು ಜಪ್ತು ಮಾಡಲಿಲ್ಲ. ನಂತರ ಆ ಕೊಠಡಿಗೆ ಹೊಂದಿಕೊಂಡಿದ್ದ ಸ್ನಾನದ ಕೋಣೆಗೆ ಹೋಗಿ ಪರಿಶೀಲಿಸಿದೆವು . ಅಲ್ಲಿ ಇದ್ದ ಸೋಪು ಇತ್ಯಾದಿ ವಸ್ತುಗಳನ್ನು ಕ್ರಮ ಸಂ. 182 ರಿಂದ 186 ರ ಪ್ರಕಾರ ಪಂಚನಾಮೆಯಲ್ಲಿ ನಮೂದಿಸಿಕೊಂಡೆವು . ಆ ವಸ್ತುಗಳ ಅಂದಾಜು ಬೆಲೆಯನ್ನು ಪಂಚನಾಮೆಯಲ್ಲಿ ನಮೂದಿಸಿಕೊಂಡೆವು . ಆರೋಪಿಯ ತಮ್ಮ ಮತ್ತು ನಾವು ಸೇರಿ ಅಂದಾಜು ಬೆಲೆಯನ್ನು ನಮೂದಿಸಿರುತ್ತೇವೆ . ಆ ಪಂಚನಾಮೆಯನ್ನು ಮೈಸೂರಿನಿಂದ ಲೋಕಾಯುಕ್ತ ಪೊಲೀಸ್ ನವರು ತಂದಿದ್ದ ಬೆರಳಚ್ಚು ಯಂತ್ರದಲ್ಲಿ ಬೆರಳಚ್ಚು ಮಾಡಿದರು . ಫ್ಲಾಟ್ ನಲ್ಲಿಯೇ ಅದನ್ನು ಬೆರಳಚ್ಚು ಮಾಡಿದರು . ಅದಕ್ಕೆ ನಾವು ಪಂಚರು , ಆರಕ್ಷಕ ನಿರೀಕ್ಷಕರು , ಆರೋಪಿಯ ತಮ್ಮ ಮತ್ತು ಅಪಾರ್ಟ್ ಮೆಂಟ್ ನ ಕಾವಲುಗಾರ ಸಹಿ ಮಾಡಿದರು. ಪ್ರತಿ ಪುಟದಲ್ಲಿ ಪಂಚನಾಮೆಯಲ್ಲಿ ನಾನು ರುಜು ಮಾಡಿದ್ದೇನೆ . ಈಗ ಆ ಪಂಚನಾಮೆಯನ್ನು ನೋಡಿರುತ್ತೇನೆ. ಅದರಲ್ಲಿ ನನ್ನ ರುಜುಗಳು ಇವೆ . ಆ ಪಂಚನಾಮೆಯನ್ನು

ನಿ.ಪಿ. 87 ಎಂದು ಗುರುತಿಸಲಾಯಿತು. ಅದರಲ್ಲಿ ಸಾಕ್ಷಿಯ ರುಜುವನ್ನು ಕೊನೆಯ ಪುಟದಲ್ಲಿ ನಿ.ಪಿ. 87(ಎ) ಎಂದು ಗುರುತಿಸಲಾಯಿತು. ನಾನು ಸಹಿ ಮಾಡುವುದಕ್ಕೆ ಮೊದಲು ಆ ಪಂಚನಾಮೆಯನ್ನು ಓದಿಕೊಂಡಿರುತ್ತೇನೆ ಮತ್ತು ಅದರಲ್ಲಿ ಬರೆದಿರುವ ವಿಷಯಗಳೆಲ್ಲಾ ಸಹಿ ಇತ್ತು . ಅಲ್ಲಿ ನಡೆಸಿದ ಪ್ರಕ್ರಿಯೆ ಪ್ರಕಾರ ಅದನ್ನು ಬರೆಯಲಾಗಿತ್ತು . ನಂತರ ಅದಕ್ಕೆ ನಾನು ರುಜು ಮಾಡಿದ್ದೇನೆ. ನನ್ನ ಜೊತೆಯಲ್ಲಿದ್ದ ಇನ್ನೊಬ್ಬ ಪಂಚರು ಸಹ ಎಲ್ಲಾ ಪ್ರಕ್ರಿಯೆಯಲ್ಲಿ ಭಾಗವಹಿಸಿರುತ್ತಾರೆ ಮತ್ತು ರುಜು ಮಾಡಿದ್ದಾರೆ . ಆಗ ಜಪ್ತು ಮಾಡಿದ ದಾಖಲಾತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ಅವುಗಳನ್ನು ನೋಡಿರುತ್ತೇನೆ. ಆ ದಾಖಲೆಗಳಲ್ಲಿ ಸಹ ನಾನು ಪ್ರತಿ ದಾಖಲೆಯಲ್ಲಿ ನಾನು ಮತ್ತು ಇನ್ನೊಬ್ಬ ಪಂಚ ಹಾಗೂ ನಿರೀಕ್ಷಕರು ಸಹಿ ಮಾಡಿದ್ದೇವೆ. ಆ ದಾಖಲಾತಿಗಳನ್ನು ನಿ.ಪಿ. 88 ರಿಂದ 135 ಎಂದು ಗುರುತಿಸಲಾಯಿತು. ಅವುಗಳಲ್ಲಿ ಸಾಕ್ಷಿಯು ಅವರ ರುಜುಗಳನ್ನು ಗುರುತಿಸಿದ್ದು ಆ ರುಜುಗಳನ್ನು ನಿ.ಪಿ. 88(ಎ) ರಿಂದ 135(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್ ಎಫ್ ಡಿ ರವರಿಂದ**

2. ನನಗೆ ಪಂಚನಾಮೆಗೆ ಬರುವಂತೆ ಲಿಖಿತ ತಿಳುವಳಿಕೆ ಪತ್ರ ಕೊಟ್ಟಿರಲಿಲ್ಲ. ಬೆಳಗಾವಿಯಲ್ಲಿ ನಾವು ಹೋದ ಪ್ಲಾಟ್ ನ ಮಾಲೀಕತ್ವಕ್ಕೆ ಸಂಬಂಧಪಟ್ಟ ದಾಖಲಾತಿಯನ್ನು ನಾವು ಪರಿಶೀಲಿಸಿರುವುದಿಲ್ಲ. ಪಂಚನಾಮೆಯಲ್ಲಿ ನಮೂದಿಸಿರುವ ವಸ್ತುಗಳ ಮೌಲ್ಯವನ್ನು ಯಾವ ಮಾನದಂಡದ ಮೇಲೆ ಮಾಡಿದ್ದೇವೆ ಎಂದು ನಮೂದು ಮಾಡಿಲ್ಲ ಎಂದರೆ ಆರೋಪಿಯ ತಮ್ಮ ಮತ್ತು ನಮ್ಮ ಲೋಕಾಯುಕ್ತ ತಂಡದವರು ಅಂದಾಜಿನ ಮೇಲೆ ಅದನ್ನು ನಮೂದಿಸಿದ್ದೇವೆ. ಅಲ್ಲಿ ಇದ್ದ ವಸ್ತುಗಳು ಯಾವ ಸ್ಥಿತಿಯಲ್ಲಿ ಇದ್ದವು ಎಂಬ ಬಗ್ಗೆ ಪಂಚನಾಮೆಯಲ್ಲಿ ಬರೆದಿಲ್ಲ ಎಂದರೆ ಆ ವಸ್ತುಗಳು ಹೇಗೆ ಇದ್ದವೋ ಹಾಗೆ ನಮೂದಿಸಿದ್ದೇವೆ. ಬೆರಳಚ್ಚು ಯಂತ್ರವನ್ನು ಮೈಸೂರಿನ ಲೋಕಾಯುಕ್ತ ಕಚೇರಿಯಿಂದ ಅಲ್ಲಿಗೆ ತೆಗದುಕೊಂಡು ಹೋದ ಬಗ್ಗೆ ಪಂಚನಾಮೆಯಲ್ಲಿ ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ.

3. ತನಿಖಾಧಿಕಾರಿಗೆ ಅನುಕೂಲ ಮಾಡಲು ಅಂದಾಜು ಮೌಲ್ಯವನ್ನು ವಾಸ್ತವ ಮೌಲ್ಯಕ್ಕಿಂತ ಹೆಚ್ಚಾಗಿ ಪಂಚನಾಮೆಯಲ್ಲಿ ನಮೂದಿಸಿದ್ದೇವೆ ಎಂದರೆ ಆ ರೀತಿ ಉದ್ದೇಶ ಏನೂ

ಇರುವುದಿಲ್ಲ. ಆದರೆ ಯಾರಿಗೂ ಅವುಗಳ ನಿಜ ಬೆಲೆ ಗೊತ್ತಿಲ್ಲದ ಕಾರಣ ಅಂದಾಜು ಬೆಲೆಯನ್ನು ನಮೂದಿಸಿದ್ದೇವೆ . ಆರೋಪಿಯ ತಮ್ಮ ಆಗಲಿ ಅಥವಾ ಬೇರೆ ಯಾರೇ ಆಗಲಿ ಆ ವಸ್ತುಗಳ ಅಂದಾಜು ಮೌಲ್ಯವನ್ನು ಪಂಚನಾಮೆ ಸಮಯದಲ್ಲಿ ಹೇಳಿಲ್ಲ ಎಂದರೆ ಆರೋಪಿಯ ಸಹೋದರನ ಸಮಕ್ಷಮದಲ್ಲಿ ಅಂದಾಜು ಮೌಲ್ಯ ಮಾಡಿದ್ದೇವೆ . ಪಂಚನಾಮೆಯಲ್ಲಿ ತೋರಿಸಿರುವ ವಸ್ತುಗಳ ಮೌಲ್ಯವನ್ನು ತನಿಖಾಧಿಕಾರಿ ಮತ್ತು ನಾವು ಬೇಕಾಬಿಟ್ಟಿಯಾಗಿ ತೋರಿಸಿದ್ದೇವೆ ಎಂದರೆ ಸರಿಯಲ್ಲ. ಜಪ್ತು ಮಾಡಿರುವ ದಾಖಲಾತಿಗಳು ಯಾರಿಗೆ ಸಂಬಂಧಪಟ್ಟಿವೆ ಎಂದು ಪಂಚನಾಮೆಯಲ್ಲಿ ನಮೂದಿಸಿಲ್ಲ ಎಂದರೆ ಆರೋಪಿಯ ಸದರಿ ಮನೆಯಲ್ಲಿ ಇದ್ದ ದಾಖಲಾತಿಗಳನ್ನು ಜಪ್ತು ಮಾಡಲಾಗಿದೆ . ಆ ದಾಖಲಾತಿಗಳಲ್ಲಿ ಕೆಲವು ದಾಖಲಾತಿಗಳ ಮೇಲೆ ಯಾವುದೇ ಮೊಹರು ಇರುವುದಿಲ್ಲ ಎಂದರೆ ಅವು ಹೇಗೆ ಇದ್ದವೋ ಹಾಗೆ ಜಪ್ತು ಮಾಡಿದ್ದೇವೆ . ಪಂಚನಾಮೆಯಲ್ಲಿ ಬರೆದಿರುವ ಮೌಲ್ಯವನ್ನು ಬೇಕಾಬಿಟ್ಟಿಯಾಗಿ ಬರೆದಿದ್ದರೂ ತನಿಖಾಧಿಕಾರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ತಮ್ಮನ ಸಹಿಯನ್ನು ಪಂಚನಾಮೆಗೆ ಪಡೆದಿದ್ದೇವೆ . ಅವರ ರುಜುವನ್ನು ಪಂಚನಾಮೆಯಲ್ಲಿ ನಾನು ಗುರುತಿಸುತ್ತೇನೆ ಎಂದು ಸಾಕ್ಷಿ ಆ ರುಜುವನ್ನು ಗುರುತಿಸಿದ್ದಾರೆ . ಆ ರುಜುವನ್ನು ನಿ.ಪಿ. 87(ಬಿ) ಎಂದು ಗುರುತಿಸಲಾಯಿತು.

**<u>ಮರು ವಿಚಾರಣೆಃ – ಇಲ್ಲ –</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ